ಆನಂತರದಲ್ಲಿ ಸದರೀ 220 ಕೆ.ವಿ. ಹೈಟೆನ್ಷನ್‌ಲೈನ್ ಕೆಳಗೆ ವಿವೇಕಾನಂದ ವಿದ್ಯಾಪೀಠ ಶಾಲೆಯ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ವಿವೇಕಾನಂದ ವಿದ್ಯಾಪೀಠ ಸಂಸ್ಥೆಯು ಮೇಲ್ಮನವಿ ಸಲ್ಲಿಸಿದ್ದು, (ಮೇಲ್ಮನವಿ ಸಂಖ್ಯೆ 24333/2005) ಈ ಮೇಲ್ಮನವಿಯು ದಿನಾಂಕ: 5–01–2009 ರಂದು ಇತ್ಯರ್ಥಗೊಂಡಿರುತ್ತದೆ. ವಿವೇಕಾನಂದ ವಿದ್ಯಾಪೀಠ ಸಂಸ್ಥೆಯು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಈ ಕಟ್ಟಡವನ್ನು ತಾವು ತೆರವುಗೊಳಿಸಿರುವುದಾಗಿ ಮುಚ್ಚಳಿಕೆಯನ್ನು ನೀಡಿರುತ್ತಾರೆ. ಈ ಮುಚ್ಚಳಿಕೆಯ ಆಧಾರದ ಮೇಲೆ ರಾಜ್ಯ ಉಚ್ಚ ನ್ಯಾಯಾಲಯವು ಮೇಲ್ಮನವಿಯನ್ನು ಇತ್ಯರ್ಥಪಡಿಸಿರುತ್ತದೆ. ಮೇಲ್ಕಂಡ ಹೈ ಟೆನ್ಷನ್ ಲೈನ್ 1965ನೇ ಇಸವಿಯಿಂದಲೇ ಕಾರ್ಯನಿರ್ವಹಿಸುತ್ತಿದ್ದು, ಆನಂತರದಲ್ಲಿ ಸದರಿ ಕಟ್ಟಡವು ನಿರ್ಮಾಣಗೊಂಡಿರುವುದರಿಂದ ಮೇಲ್ಕಂಡ 220 ಕೆ.ವಿ. ಹೈಟೆನ್ಷನ್ ಲೈನನ್ನು ಸ್ಥಳಾಂತರಿಸುವ ಪ್ರಶ್ನೆಯ ಉದ್ಭವಿಸುವುದಿಲ್ಲ.

830 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವ್ಯಾಪ್ತಿಯ ಕೇಂದ್ರ ನೆರವಿನ ಯೋಜನೆಗಳ ಅನುಷ್ಠಾನದ ವಿವರಗಳೇನು;

ಆ) ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ನೆರವಿನ ಯೋಜನೆಗಳ ಮೂಲಕ ರಾಜ್ಯಕ್ಕೆ ಮಂಜೂರಾದ ಹಣದ ಮೊತ್ತವೆಷ್ಟು; ಅನುದಾನದ ಪೂರ್ಣ ಬಳಕೆಯನ್ನು ಮಾಡಲಾಗಿದೆಯೇ;

ಇ) ಉದ್ಯೋಗ ಖಾತರಿ ಯೋಜನೆಗಾಗಿ ವ್ಯಯ ಮಾಡಿದ್ದ ಹಣ ಮತ್ತು ಅನುಷ್ಠಾನದ ವಿವರಗಳೇನು; ಸದರಿ ಯೋಜನೆಯನ್ನು ಇನ್ನೂ ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ಆ) 2007–08ನೇ ಸಾಲಿನಲ್ಲಿ ಪ್ರಮುಖ ಕೇಂದ್ರನೆರವಿನ ಯೋಜನೆಗಳಡಿ ಭಾರತ ಸರ್ಕಾರದಿಂದ ರೂ.1446 ಕೋಟಿ ಬಿಡುಗಡೆಯಾಗಿದ್ದು, ಸಂಪೂರ್ಣ ಅನುದಾನ ವಿನಿಯೋಗಿಸಲಾಗಿದೆ.

2008–09ನೇ ಸಾಲಿನಲ್ಲಿ ಕೇಂದ್ರನೆರವಿನ ಯೋಜನೆಗಳಡಿ ಭಾರತ ಸರ್ಕಾರದಿಂದ ರೂ.1926 ಕೋಟಿ ಬಿಡುಗಡೆಯಾಗಿದ್ದು, 1750 ಕೋಟಿ ರೂ.ಖರ್ಚು ಮಾಡಲಾಗಿದ್ದು, ಉಳಿಕೆ ಹಣವನ್ನು 2009–10ನೇ ಸಾಲಿನಲ್ಲಿ ಖರ್ಚು ಮಾಡಲು ಕ್ರಮಕೈಗೊಂಡಿದೆ.

ಇ) ಮಾಹಿತಿಯನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 830 ರ ಅನುಬಂಧ–1 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 2009–10ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಕೇಂದ್ರನೆರವಿನ ಪ್ರಮುಖ ಯೋಜನೆಗಳ ವಿವರ

ಕ್ರ ಸಂ.	ಯೋಜನೆಗಳ ವಿವರ
1	ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ
2	ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
3	ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ
4	ಡಿ.ಆರ್.ಡಿ.ಎ. (ಆಡಳಿತ)
5	ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ
6	ಗ್ರಾಮೀಣ ನೀರು ಸರಬರಾಜು, ರಾಜೀವ್ ಗಾಂಧಿ ಸಬ್ ಮಿಷನ್
7	ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆ
8	ಸಂಪೂರ್ಣ ಸ್ವಚ್ಛತಾ ಆಂದೋಲನ
9	ಹಿಂದುಳಿದ ಪ್ರದೇಶಗಳ ಸ್ಥಳೀಯ ಅಭಿವೃದ್ಧಿ ನಿಧಿ (ಬಿ.ಆರ್.ಜಿ.ಎಫ್)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 830 ರ ಅನುಬಂಧ–2
ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ವಿವರಗಳು

- 2009–10ನೇ ಸಾಲಿನಲ್ಲಿ ನವೆಂಬರ್ 09ರ ವರೆಗೆ 1106 ಕೋಟಿ ರೂ.ಗಳನ್ನು ಖರ್ಚು ಮಾಡಿದೆ. 49.56 ಲಕ್ಷ ಉದ್ಯೋಗ ಚೀಟಿಗಳನ್ನು ವಿತರಿಸಲಾಗಿದ್ದು, 17.73 ಲಕ್ಷ ಕುಟುಂಬಗಳಿಗೆ ಉದ್ಯೋಗ ಒದಗಿಸಿ, 870.70 ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ.
- ಸದರಿ ಯೋಜನೆಯನ್ನು ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ ಹೆಚ್ಚಿನ ಅಧಿಕಾರಗಳನ್ನು ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮಟ್ಟಕ್ಕೆ ನೀಡಿದೆ.
- ಎಲ್ಲಾ ಇಲಾಖೆಗಳು ಈ ಯೋಜನೆಯೊಂದಿಗೆ ತಮ್ಮ ತಮ್ಮ ಇಲಾಖೆಯ ಕಾರ್ಯಕ್ರಮಗಳನ್ನು ಒಗ್ಗೂಡಿಸಿಕೊಂಡು ಅನುಷ್ಠಾನಗೊಳಿಸಲು ಸರಳೀಕೃತ ಮಾರ್ಗಸೂಚಿಗಳನ್ನು ಹೊರಡಿಸಿದೆ.
- ಯೋಜನಾ ಅನುಷ್ಠಾನಕ್ಕೆ ಅನುವಾಗುವಂತೆ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಹೆಚ್ಚಿನ ಆಡಳಿತ ಹಾಗೂ ತಾಂತ್ರಿಕ ಸೇವಾ ನೆರವು ಪಡೆಯಲು ಅವಕಾಶ ಕಲ್ಪಿಸಿದೆ.
- ಅತಿವೃಷ್ಟಿಗೆ ಒಳಗಾಗಿರುವ ಜಿಲ್ಲೆಗಳಲ್ಲಿ ಹೊಸ ಬಡಾವಣೆ ಅಭಿವೃದ್ಧಿ, ರಸ್ತೆ ಮತ್ತು ಇತರೆ ಮೂಲಭೂತ ಸೌಕರ್ಯಗಳಂತಹ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಿ ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಸೂಚಿಸಿದೆ.